JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಬೇಂದ್ರೆ ಕವಿತೆಗಳಲ್ಲಿ ಪ್ರೀತಿಯ ಅನನ್ಯತೆ

ಡಾ.ಚಿತ್ತಯ್ಯ ಕೆ.
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ)
ಚಿತ್ರದುರ್ಗ–577501
email id -Chisvr7clk@gmail.com

ಹೊಸಗನ್ನಡ ಸಾಹಿತ್ಯದ ಆರಂಭವನ್ನು 19ನೇ ಶತಮಾನದಲ್ಲಿಯೇ ಗುರುತಿಸುತ್ತೇವೆ. ಇದು ಭಾರತೀಯರ ಬದುಕಿನಲ್ಲಿ ಉಂಟಾದ ಸಂಕ್ರಮಣ ಕಾಲವೂ ಹೌದು. ಈ ವೇಳೆಗಾಗಲೇ ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಕೊನೆಗೊಂಡು ಆಂಗ್ಲರ ಆಡಳಿತ ಪ್ರಾರಂಭವಾಗಿತ್ತು. ಅದುವರೆಗೆ ದೇಶದಲ್ಲಿದ್ದ ಒಳಜಗಳಗಳು ಕ್ರಮೇಣ ಕಡಿಮೆಯಾಗಿ, ಇಡೀ ಭಾರತ ಯುದ್ಧ ಮುಕ್ತವಾದ ಸಂದರ್ಭವದು. ಮೈಸೂರು ಸಂಸ್ಥಾನದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಆಡಳಿತ ನಡೆಸುತ್ತಿದ್ದರೂ ಇಂಗ್ಲಿಷ್ ಅಧಿಕಾರಿಗಳ ಪ್ರಭಾವದಿಂದ ದೇಶದ ಅಲ್ಲಲ್ಲಿ ಅಲ್ಪ ಸ್ವಲ್ಪ ಇಂಗ್ಲಿಷ್ ವಿದ್ಯಾಭ್ಯಾಸ ಪರಿಚಯವಾಗಿತ್ತು. ಹೀಗಾಗಿ ಇಂಗ್ಲಿಷ್ ವಿದ್ಯಾಭ್ಯಾಸ– ಆ ಭಾಷೆಯ ಮೂಲಕ ಇಂಗ್ಲಿಷ್ ಸಾಹಿತ್ಯ, ಸಂಸ್ಕೃತಿ, ಪಾಶ್ಚಿಮಾತ್ಯ ವಿಚಾರಧಾರೆಗಳು ಹಾಗೂ ಚಿಂತನೆಗಳು ಭಾರತೀಯರಿಗೆ ಪರಿಚಯವಾಗ ತೊಡಗಿದವು. ಇದರ ಪ್ರಭಾವ ಮತ್ತು ಪ್ರೇರಣೆ ಹೊಸಬಗೆಯ ಆಲೋಚನೆ, ಅಭಿವ್ಯಕ್ತಿಗಳ ಕಡೆಗೆ ಕನ್ನಡ ಸಾಹಿತ್ಯವನ್ನು ಕೊಂಡೊಯ್ಯಿತು. ಇದರಿಂದ ಹೊಸ ಸಾಹಿತ್ಯಿಕ ಜಗತ್ತು ಹಾಗೂ ಜೀವನ ಮನೋಧರ್ಮದ ದರ್ಶನ ಮಾಡಿಸಿತು. ಇದರಿಂದ ಇಂಗ್ಲಿಷ್ ಭಾಷೆ, ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. ಅಲ್ಲದೆ ಇಂಗ್ಲಿಷ್ ಭಾಷೆಗೆ ಅನುವಾದಗೊಂಡಿದ್ದ ಗ್ರೀಕ್, ಜರ್ಮನ್, ರಷ್ಯಾ, ಇಟಲಿ ಮುಂತಾದ ಸಾಹಿತಿಗಳ ಪರಿಚಯವೂ ಆಯಿತು. ಇಂಗ್ಲಿಷಿನ ರಮ್ಯ ಸಾಹಿತ್ಯದಿಂದ ಪ್ರೇರಿತರಾದ ಕನ್ನಡ ಕವಿಗಳು ಅಂದಿನ ಸಮಾಜದ ಸ್ಥಿತಿಗತಿಗಳು, ಪ್ರಕೃತಿ, ಸಂಸ್ಕೃತಿ, ಬಡತನ, ಬದುಕಿನ ಪ್ರೀತಿ, ಪ್ರೇಮ, ಪ್ರಣಯ, ಸಾವು, ನೋವು, ಜೀವನದ ಸಂಕಷ್ಟಗಳು, ಸ್ವಾತಂತ್ರ್ಯದ ಹಂಬಲ, ಕನ್ನಡಾಭಿಮಾನ, ದೇಶಾಭಿಮಾನ ಮುಂತಾದ ಅಂಶಗಳು ಕಾವ್ಯದ ಮುಖ್ಯ ವಿಚಾರಗಳಾದವು.

ಕನ್ನಡ ನವೋದಯ (ರೋಮ್ಯಾಂಟಿಕ್) ರಮ್ಯ ಕವಿಗಳನ್ನು ಬಹುವಾಗಿ ಆಕರ್ಷಿಸಿದ್ದು ಇಂಗ್ಲಿಷ್ ಭಾಷೆಯ ಭಾವಗೀತೆಯ ಶ್ರೀಮಂತ ಪ್ರಪಂಚ. ಭಾವಗೀತೆ ಮನುಷ್ಯನ ಒಳಗಿನ ಭಾವನೆಗಳು, ಕನಸುಗಳು, ನೋವು–ನಲಿವು ಜೀವಂತವಾಗಿ ಅಭಿವ್ಯಕ್ತಿಸುವ ಮೋಡಿ ಮಾಡುವ ಮಾಂತ್ರಿಕತೆಯನ್ನು ಹೊಂದಿದೆ ಎಂಬ ಅಂಶವನ್ನು ಕಂಡುಕೊಂಡರು. ಭಾವಗೀತೆಯನ್ನು ತಮ್ಮ ಸಾಹಿತ್ಯದ ಅಭಿವ್ಯಕ್ತಿ ಮಾಧ್ಯಮವಾಗಿ ಸ್ವೀಕರಿಸಿದರು. ಕವಿಗಳು ತಮ್ಮ ಓದುಗರನ್ನು ತಾವೇ ಹುಡುಕಿಕೊಂಡರು. ಈ ಕಾಲಘಟ್ಟದಲ್ಲಿ ಪ್ರಮುಖವಾಗಿ ಪಂಜೆ ಮಂಗೇಶರಾಯರು, ಬಿ.ಎಂ.ಶ್ರೀ, ಗೋವಿಂದ ಪೈ, ಕುವೆಂಪು, ಬೇಂದ್ರೆ ಮುಂತಾದವರು ಸಭೆಗಳಲ್ಲಿ ತಮ್ಮ ಕವನಗಳನ್ನು ತಾವೇ ಓದುವುದು, ತಮ್ಮ ಕವನ ಸಂಕಲವನ್ನು ತಾವೇ ಪ್ರಕಟಿಸುವ ಮನೋಧರ್ಮ ಬೆಳೆಸಿಕೊಂಡಿದ್ದರು.  ಇವರು ತಮ್ಮ ಕಾವ್ಯಗಳಲ್ಲಿ ಪ್ರಕೃತಿ ಪ್ರೇಮ, ನಿಸರ್ಗದ ಚೇತನ, ಆರಾಧನೆ ಚಿಂತನೆ ಅವರ ಕಾವ್ಯದಲ್ಲಿ ಕಂಡು ಬರುತ್ತದೆ.

ಜೀವನದ ಆದರ್ಶಗಳಲ್ಲಿ ಪ್ರೇಮ–ಪ್ರೀತಿ ಮುಖ್ಯವಾದವುಗಳು. ಇಷ್ಟವಾದ ವಸ್ತು, ವ್ಯಕ್ತಿ ಹಾಗೂ ಘಟನೆಗಳಿಂದ ದೊರಕುವ ಆನಂದ ಪ್ರೀತಿ–ಪ್ರೇಮದ ಫಲಶ್ರುತಿ. ಪ್ರೀತಿಯೆಂಬುದು ಮನುಷ್ಯಜಾತಿಯಲ್ಲಿ ಮಾತ್ರವಲ್ಲ, ಪಶುಪಕ್ಷಿಗಳಲ್ಲಿಯೂ ಸಹಜಾತವಾಗಿದೆ. ಗಂಡು–ಹೆಣ್ಣು, ಪ್ರಿಯಕರ–ಪ್ರಿಯೆ, ನಾಯಕ–ನಾಯಿಕೆ ಇವೆಲ್ಲವೂ ಒಂದೇ ಆಗಿದ್ದರೂ ಪರಿಸರದಿಂದ ಭಿನ್ನವಾಗಿವೆ. ನಿತ್ಯ ಜೀವನದಲ್ಲಿ ಗಂಡು–ಹೆಣ್ಣು ಪರಸ್ಪರ ಆಕರ್ಷಣೆ ಗುಣಗಳನ್ನು ಮೆಚ್ಚಿ ಒಲಿದಾಗ ಪತಿ–ಪತ್ನಿ ಆಗದೆ ಪ್ರಿಯಕರ–ಪ್ರಿಯೆಯೂಯಾಗಿಯೂ ಉಳಿಯಬಹುದು. ಪ್ರೇಮದ ಒಲುಮೆ ಕಿಚ್ಚಾಗಿ , ತಾಪಕೊಟ್ಟು ತಪ ಮಾಡಲು ಹಚ್ಚಿ ಶ್ರೇಯಸ್ಸು ಪ್ರಾಪ್ತಿಯಾಗಿ ಹೊರಳುವಂತೆ ಮಾಡುತ್ತವೆ ಎನ್ನುತ್ತಾರೆ ವಿಮರ್ಶಕ ದಿವಂಗತ ಜಿ.ಕೃಷ್ಣಪ್ಪ ಅವರು. ಬೇಂದ್ರೆಯವರ ಜೀವನ ಪ್ರೀತಿಯ ಬಹುಮುಖವಾದುದು. ಆಳವಾದ ಅನುಭವದೊಡ್ಡ ಪ್ರೇರಕ ಶಕ್ತಿಯಾಗಿ ಅವರ ವ್ಯಕ್ತಿತ್ವವನ್ನು ರೂಪಿಸಿದೆ. ಅವರ ಪ್ರೇಮಗೀತೆಗಳಲ್ಲಿ ಬಲತ್ಕಾರದ ಶೋಷಣೆಯ ವಿಷಯ ಬರುವುದಿಲ್ಲ. ಪ್ರೇಮ ಮತ್ತು ಒಲವಿನ ಸಂದೇಶವಿದೆ.

ಪ್ರೀತಿ ಎಂಬುವುದು ಗಂಡು–ಹೆಣ್ಣಿನ ಯೌವನದ ಸಹಜವಾದ ಬಯಕೆ. ಅದು ಪ್ರೇಮವಾಗುವುದು ಪ್ರಿಯಕರ–ಪ್ರೆಯಸಿಯು ಪ್ರೀತಿಯ ಸ್ವಾರ್ಥವನ್ನು ಮೀರಿ ಪ್ರೇಮಾರಾಧಕರಾಗ ಅಂತಹ ಪ್ರೇಮದಲ್ಲಿ ಕಾಮಕ್ಕೆ ಶುದ್ದತೆಯನ್ನು ತಂದುಕೊಡುತ್ತದೆ. ಈ ಬಗೆಯ ಶುದ್ಧ ಪ್ರೇಮ ಒಲವಿನ ಕವಿತೆಗಳು ಬೇಂದ್ರೆಯವರ ರಚನೆಯಲ್ಲಿ ಕಾಣಬಹುದು.

ಜೀವನದಲ್ಲಿ ಬಡತನ ಸಿರಿತನ ಮುಖ್ಯವಾಗುವುದಿಲ್ಲ, ಪ್ರೇಮ ಒಂದೇ ಪ್ರಮುಖ. ಬಡವರ ಮಗಳು ಕವಿತೆಯಲ್ಲಿ ಹೆಣ್ಣನ್ನು ಒಲಿಸಿಕೊಳ್ಳಲು ಪ್ರಯತ್ನಿಸಿ ಸೋತ ಭಾವ ಕಂಡು ಬರುತ್ತದೆ. ಹೆಣ್ಣಿನ ಯೌವನದ ಆಸೆಯನ್ನು ಕೆರಳಿಸಿ ಕೊನೆಗೆ ತನ್ನ ಐಶ್ವರ್ಯದ ಸಿರಿಯಿಂದೊಲಿಸಿಕೊಳ್ಳಲು ಪ್ರಯತ್ನಿಸಿದುದರ ಪ್ರಣಯದ ಚಿತ್ರಣವಿದೆ.

ಮಾವು ಚಿಗಿತು ಮಲ್ಲಿಗೆ ಹೂತು
ಸುಗ್ಗಿ ಬಂದು ಮಗ್ಗಿಯ ಇರುವಿ
ಕಣ್ಣು ಮುಚ್ಚಿ ನಿನ್ನ ನೆನೆದೇ
ಎದಿ ಮುಗುಳು ತೆರೆಯಲ್ಲೊಲ್ಲಿ

ಎಂದು ಕೇಳುವಲ್ಲಿ ಅವಳು ಯೌವನಸ್ತೆಯಾದರೂ ಮಗ್ಗಿಯಾಗಿಯೇ ಇರುವುದು ಮತ್ತು ಅವನು-ಅವಳು ಅರಳಲು ಕಾಯುವುದು ಮನಸ್ಸಿನ-ವಯಸ್ಸಿನ ಭಾವಾಭಿವ್ಯಕ್ತಿಯನ್ನು ಮತ್ತು ಅವಳನ್ನು ಒಲಿಸಿಕೊಳ್ಳಲು ಸಾಹಸಪಡುವ ಮನೋಭಾವವನ್ನು ಪ್ರಕಟಿಸುತ್ತದೆ.

ಬಂಗಾರ ಮಾಡದಿಂದ
ಸಿಂಗಾರದ ಮಳೆಗರಸೇನ
ಹ್ಯಾಂಗಾರ ಕಣ್ಮನಸೆತ್ತಿ
ಒಮ್ಮೆ ನೋಡ ಒಮ್ಮೆ ನೋಡ

ಪ್ರೇಮಯಾಚನೆಯನ್ನು ಕಂಡಾಗ ಗಂಡು ನಿಜವಾದ ಪ್ರಣಯಿ ಎನಿಸುತ್ತದೆ. ಮತ್ತು ಸಮಾಜದಲ್ಲಿನ ಯುವಕ-ಯುವತಿಯರ ಪ್ರೀತಿಯ ಒಂದು ಮುಖವನ್ನು ಈ ಕವಿತೆ ಚಿತ್ರಿಸುತ್ತದೆ.

ನಕ್ಷತ್ರ ಎಂಬ ಕವಿತೆಯಲ್ಲಿ
ಗದ್ದವನೆತ್ತಿ ಮುದ್ದಿದುವ ಕಣ್ಣು
ಇರದಿರೆ ಕತ್ತನು ಎತ್ತದು ಹೆಣ್ಣು

ಎಂದಿರುವುದು ಹೆಣ್ಣು ನಿಜ ಪ್ರೀತಿಗಾಗಿ ಆಶಿಸುವುದನ್ನು ತಿಳಿಸುತ್ತದೆ. ಬಡತನ ಸಿರಿತನವನ್ನು ಮೀರಿದ ಒಲವು ಹೆಣ್ಣು- ಗಂಡಿನ ದೇಹದಲ್ಲಿ ಮೂಡಬೇಕು. ಅದು ಮಾನವ ಧರ್ಮದ ನೀತಿಯಾಗಬೇಕು. ಅದಿಲ್ಲದಿದ್ದರೆ ಒಲವಿನ ದೀಪ ಬೆಳಗುವುದಿಲ್ಲ ಎಂದಿದ್ದಾರೆ ಬೇಂದ್ರೆ.

ದೇಹದಾಗ ಸ್ನೇಹ ಇರದಿದ್ದರ
ಮನದ ಮನಿಯೊಳಗ ದೀಪ ಎಲ್ಲೀದು

ಪ್ರೀತಿ ಎಂಬುದು ಅವರವರ ಬುದ್ಧಿ- ಭಾವನೆಗಳ ಸಹಜ ಸಂಯೋಗದಿಂದ ಬರಬರುತ್ತ ಅದು ಒಂದು ದರ್ಶನವಾಗಿ ಪರಿಣಮಿಸುತ್ತದೆ. ಸ್ತ್ರೀ-ಪುರುಷರ ಸಂಬಂಧದಲ್ಲಿ, ವಿಶೇಷವಾಗಿದಾಂಪತ್ಯಜೀವನದಲ್ಲಿ ಕಾಮವು ಒಂದು ಪ್ರಬಲ ಶಕ್ತಿಯಾಗಿ ಮೆರೆಯುತ್ತದೆ. ಪ್ರೇಮವೆಂಬ ಭಾವದಲ್ಲಿ ಕಾಮವು ಅನುಸ್ಯೂತವಾಗಿರುವುದರಿಂದಲೇ ಜೀವನದಲ್ಲಿ ಸ್ವಾರಸ್ಯವಿದೆ. ಸಾತತ್ಯವಿದೆ. ಆದರೆ ಅದು ಅತಿಯಾದರೆ, ಅಸಾಧುವಾದರೆ ಅನಾಹುತವು ಅನಿವಾರ್ಯ, ವಿಶೇಷವಾಗಿ ಪ್ರೇಮ ಅಥವಾ ಪ್ರೀತಿಯನ್ನು ನಾಲ್ಕುಗೋಡೆಯ ನಡುವೆ ಇಡದೆ ಗೋಡೆಗಳ ಮಿತಿಯನ್ನು ದಾಟಿ ಹೋಗಬೇಕೆನ್ನುವ ವ್ಯಕ್ತಿಯ ಜೀವನದಲ್ಲಿ ಒಮ್ಮೊಮ್ಮೆ ಪ್ರೇಮದ ನೆವದಲ್ಲಿ ಕಾಮವು ಕೆಣಕಿ ಅವನ ಸತ್ವಪರೀಕ್ಷೆಯನ್ನು ಮಾಡಬಹುದು. ಬೇಂದ್ರೆಯವರ ಜೀವನದಲ್ಲಿ ಅವರ ಪ್ರೀತಿದರ್ಶನವು ಅವರು ಮಾಡಿದ ಗೆಳೆತನದ ಸಾಧನೆಯಲ್ಲಿ, ಕುಟುಂಬ, ಸಮಾಜ ಪಡೆದ ಬಗೆಯಲ್ಲಿಅದರ ಸ್ವರೂಪವನ್ನು ಅರಿತುಕೊಳ್ಳಬಹುದು.

ಉತ್ತರ ದ್ರುವದಿಂ ದಕ್ಷಿಣ ಧ್ರುವಕೂ
ಚುಂಬಕ ಗಾಳಿಯು ಬೀಸುತಿದೆ
ಸೂರ್ಯನ ಬಿಂಬಕೆ ಚಂದ್ರನ ಬಿಂಬವು
ರಂಬಿಸಿ ನಗೆಯಲಿ ಮೀಸುತಿದೆ

ಈ ಕವಿತೆಯಲ್ಲಿ ಪ್ರಕೃತಿಯಲ್ಲಿರುವ ಸಹಜ ಆರ್ಕಷಣೆ, ಪ್ರೇಮದ ಬಂಧ, ಮಿಲನದ ತೀವ್ರತೆ ಇಲ್ಲಿ ಚಂದ್ರ ಮತ್ತು ಸೂರ್ಯರ ಅನಂತ ಪ್ರಣಯ ಚಿತ್ರಿಸುತ್ತದೆ. ಕವಿ ಕಲ್ಪನೆಯಲ್ಲಿ ಚಂದ್ರ ಪ್ರಿಯೆಯಾಗಿ ಸೂರ್ಯ ಪ್ರಿಯಕರನಾಗಿದ್ದಾನೆ. ಸಹಜ ಗತಿಯಲ್ಲಿ ಬೀಸುವ ಗಾಳಿ ಅವರಿಬ್ಬರಲ್ಲಿ ಪ್ರೀತಿಯ ಪ್ರವಾಹ ಹರಿಸಲು ಕಾರಣವಾಗಿದೆ.ಇದು ಕಾವ್ಯ ಪ್ರೇಮಿಗಳ ಹೃದಯವನ್ನು ತಲ್ಲಣಗೊಳಿಸುವ ಚುಂಬಕ ಶಕ್ತಿಯಾಗಿದೆ.

ಬಾತುಕೋಳಿ ಹಾಂಗ ಜಾತಕದ ಜಾತ್ಯಲ್ಲ
ನಾತ ನೀರಾಗ ಅದರಾಟ ಇದರೂಟ
ಮೀಸಲಳಿಯದ ಮಳಿಯಾಗ

ಅಗಲಿಕೆಯಲ್ಲಿ ಕಾಮ ತನ್ನ ಚಿರಂತೆಗೆ ಕಾವು ಕೊಟ್ಟು ಒಲವನ್ನು ಕಿಚ್ಚಾಗಿಸಿ ಪ್ರೇಮದ ಉದಾತ್ತತೆಯ ಆನಂದ ನೀಡುತ್ತದೆ. ಆ ಸಂಕ್ರಮಣ ಸ್ಥಿತಿಯ ಪ್ರಿಯೆ ತನ್ನ ನಲ್ಲನಿಗಾಗಿಯೇ ಜೀವ ಹಿಡಿದುಕೊಂಡು ಅವನ ಜೊತೆಯಲ್ಲಿ ಮೀಸಲಳಿಯದ ಮಳೆಯಲ್ಲಿ ಸವಿ ಉಣ್ಣುವುದು- ಆ ಅಗಲಿಕೆ, ತಡೆದುಕೊಂಡ ಪ್ರೇಮ ಸಾಮಥ್ಯದ ದ್ಯೋತಕವಾಗುತ್ತದೆ. ಬಾತುಕೋಳಿಯ ಹಾಗೆ ನಾತ ನೀರಲ್ಲಿ ಆಡುವುದಿಲ್ಲ ಇದು ನಿಜ ಪ್ರೇಮದ ಮೀಸಲಳಿಯದ ಮಳೆಗಾಗಿ ಕಾಯುವ ರೂಪಿಯಾಗಿದೆ ಎನ್ನಬಹುದು.

ಬೇಂದ್ರೆಯವರ ಕಾವ್ಯ ಪ್ರೇಮಜೀವನದಲ್ಲಿಯ ಆಕ್ಷಣೆ, ಬಯಕೆ, ವಿರಹ, ವಿರಸಗಳನ್ನು ಚಿತ್ರಿಸುತ್ತ ಗಂಡು-ಹೆಣ್ಣು ಅನುಭವ ಹೊಂದಿರಬೇಕು. ಹಾಡಬೇಕು. ಮಾಗಬೇಕು ಎಂದಿದ್ದಾರೆ. ಬಡತನದ ನೋವು ಮತ್ತು ದಾಂಪತ್ಯದ ಎದೆಯಾಳದ ಪ್ರೀತಿ ನಾನು ಬಡವಿ ಆತ ಬಡವ ಕವನದಲ್ಲಿ ಅಮರತ್ವವನ್ನು ಪಡೆದಿದೆ. ಇದು ಪತ್ನಿಯ ಮನದ ಭಾವಲಹರಿಯನ್ನು ಸೂಚಿಸುತ್ತದೆ.

ನಾನು ಬಡವಿ ಆತ ಬಡವ
ಒಲವೆ ನಮ್ಮ ಬದುಕು
ಬಳಸಿಕೊಂಡೆವದನೆ ನಾವು
ಅದುಕು ಇದಕು ಎದಕು

ನಾಡಿನ ಬಡವರು ಸಿರಿತನದಿಂದ ವಂಚಿತರಾಗಿದ್ದರೂ ಮಾನಮರ್ಯಾದೆಗಳಿಗೆ ಅಂಜಿ ನ್ಯಾಯ, ಧರ್ಮ ನೀತಿಯಿಂದ ಬದುಕುವ ಜನರಾಗಿದ್ದಾರೆ. ಬಡವಿ ತನ್ನ ಅಂತರ್ಯದ ಸವಿ ಇಲ್ಲಿ ಹಾಡಾಗಿದೆ. ಹಣ, ಒಡವೆ ದಾಂಪತ್ಯದ ಬಾಂಧವ್ಯವನ್ನು ಬಿಗಿಗೊಳಿಸದೆ ಪ್ರೀತಿಯೊಂದೆ ಬಂಧನದ ತಂತುವಾಗಿರುವುದು ಸಂಗತಿಯಾಗಿದೆ. ಗಂಡನ ಪಾವಿತ್ರ್ಯತೆ ಹೆಣ್ಣಿಗೆ ಅಭರಣವಾದಂತಿದೆ.

ಬಡತನವನ್ನು ಮೀರಿ ನಿಲ್ಲುವ ಪ್ರೀತಿಯ ಶ್ರೀಮಂತಿಕೆಯನ್ನು ವಿವರವಿವರದಲ್ಲಿಅರ್ಥತುಂಬಿ ಎತ್ತಿತೋರಿಸುತ್ತವೆ. ಮೊದಲನೆಯದರಲ್ಲಿ 'ನಾನು ಬಡವಿ ಆತ ಬಡವ ಒಲವೆ ನಮ್ಮ ಬದುಕು, ಬಳಸಿಕೊಂಡೆವದನೆ ನಾವು ಅದಕು ಇದಕು ಎದಕು ಎಂಬ ಶಿಷ್ಟಶೈಲಿಯಲ್ಲಿ ದೇಸಿಯನ್ನು ಹುದುಗೊಳಿಸಿ ನಿರ್ಮಿಸಿದ ಕವಿತೆಯಲ್ಲಿ ಪ್ರೀತಿಯ ಸಾರವೆಲ್ಲ ಅಡಕವಾಗಿದೆ. ಎಷ್ಟು ಬಡವರಾದರೂ ಪ್ರೀತಿಯೆಂಬ ಆಸ್ತಿ ಅವರಲ್ಲಿದ್ದರೆ ಅದೇ ಅವರ ದಿನನಿತ್ಯದ ಬಳಕೆಯ ಸಂಪತ್ತಾಗುತ್ತದೆ ಎಂಬ ಸೂಚನೆ ಇಲ್ಲಿದೆ. ಬಡವಿ ಜಗದೆಲ್ಲ ಜನರ ಬದುಕಿನ ಅರ್ಥವನ್ನು 'ಒಲವೆ ನಮ್ಮ ಬದುಕು' ಎಂದು ಹಾಡಿದ್ದಾಳೆ.

ವಾರಿನೋಟ, ರಾಗರತಿ, ಕಾಮಕಸ್ತೂರಿ, ನಗೀನವಿಲು, ಕಣ್ಮಸೆತ್ತಿ ಒಮ್ಮೆ ನೋಡ, ಸಖಿ, ಬಯಕೆ, ಆಕರ್ಷಣೆ, ಗಾಳಿ ಸಂಗಾತ ಮಾತು, 'ಒಲವೆ ನಮ್ಮ ಬದುಕು' ಸಂಗ್ರಹದಲ್ಲಿ ಅವುಗಳಲ್ಲಿ ಕೆಲವನ್ನು ಅನುರಾಗದ ಗೀತೆಗಳು, ವಿರಹ ಗೀತೆಗಳು, ಕೌಟುಂಬಿಕ ಗೀತೆಗಳು, ಅನುಭಾವದ ಗೀತೆಗಳು, ಸ್ನೇಹ ಗೀತೆಗಳು. ಪ್ರೇಮತತ್ವದರ್ಶವನ್ನು ಹೊಂದಿವೆ.

ಜನುಮದ ಜಾತ್ರಿ' ಎಂಬ ಜನಪದ ನುಡಿಯೆ ಕುತೂಹಲಕಾರಿಯಾಗಿದ್ದು, ನಲ್ಲನಲ್ಲೆಯರ ಬದುಕು ಸಂತಸ ಸಂಭ್ರಮದಿಂದ ಕೂಡಿರುವುದನ್ನು ಸಂಕೇತಿಸುತ್ತದೆ. ನಲ್ಲೆಯು ತನ್ನ ನಲ್ಲನ ಒಲುಮೆಯ ಕಣ್ಣಿನ ಸೂತ್ರಕ್ಕೆ ಕಣ್ಣಿಯುವ ಗೊಂಬೆ ತಾನು ಎಂದು ಹೇಳಿಕೊಂಡಿರುವುದರಲ್ಲಿ ಅವಳು ಪ್ರೀತಿಯ ಸೂತ್ರದಲ್ಲಿ ಬಂಧಿತಳಾಗಿ ಸುಖಿಯಾಗಿರುವುದು ಕಂಡು ಬರುತ್ತದೆ. ಆದ ಕಾರಣ ಅವಳಿಗೆ 'ದಿನದಿನ ಜಾತ್ರಿಯೆನಿಸಿತ್ತ ಜನುಮವು' ಆಗಿದೆ. ಗೆಳತಿಗೆ ಜಾತ್ರೆಯ ವೈಭವದಂತೆತನ್ನ ನಲ್ಲನನ್ನು ಬಣ್ಣಿಸಿ ಹೇಳುವ ರೀತಿ ಅವಳ ಒಲವಿನ ಪ್ರದರ್ಶನವಾಗಿದೆ. ಅವಳಿಗೆ ನಲ್ಲನ ಜೊತೆಯ ಬದುಕು ಸಫಲತೆಯನ್ನು ತಂದಿದೆ.

ಬೇಂದ್ರೆಯವರು ಹೆಣ್ಣಿನ ಮೃದುಭಾವ ಮತ್ತು ಆಕೆಗೆ ಸಮಾಜದಲ್ಲಿ ನೀಡಬೇಕಾದ ಸ್ಥಾನವನ್ನು ಅರಿತವರಾಗಿ ಸಮಾಜಕ್ಕೆ ಆ ಮುಖದ ಸತ್ಯವನ್ನು ದರ್ಶಿಸುತ್ತ ದಂಪತಿಗಳ ಪರಸ್ಪರ ಅರಿವಿನೊಡನೆ ಸಮಾಜ ವಿಕಾಸವಾಗಬೇಕೆಂದು ಕನಸು ಕಂಡರು. ಆದ ಕಾರಣ ತಮ್ಮ ದಾಂಪತ್ಯದ ನೋವು ನಲಿವು, ಸ್ನೇಹ ಪ್ರೇಮ, ಸೋಲು ಗೆಲುವು, ಆತಂಕ ಉಲ್ಲಾಸವನ್ನು ಸಖ-ಸಖಿ ಭಾವದಿಂದ 'ಸಖೀಗೀತ' ದಲ್ಲಿ ವಿಶ್ಲೇಷಿಸಿದರು. 'ವಿಧಿ ತಂದವಧು' ವನ್ನು ಸ್ನೇಹಿತಳನ್ನಾಗಿಸಿಕೊಂಡು ಬಾಳುವೆ ಮಾಡಿದ ಆತ್ಮಕಥೆಯನ್ನು ಕಾವ್ಯವಾಗಿ ಚಿತ್ರಿಸಿದ್ದಾರೆ. ಪಂಚಭೂತಗಳಿಂದಾದ ನಿಸರ್ಗಕವಿಯನ್ನು ಪೋಷಿಸಿ ಅವನ ಪಂಚೇಂದ್ರಿಯಗಳನ್ನು ಜಾಗೃತಗೊಳಿಸಿ ಆನಂದಮಯವಾಗಿಸಿದೆ. ಪ್ರಕೃತಿಯ ಅನುಭವ ಅವರಿಗೆ ವ್ಯಕ್ತಿಗತ ಸಂಬಂಧವಾಗಿ ಅದು 'ಬೆಳಗು' 'ಚಂದ್ರ' 'ಚಳಿಯಾಕೆ' 'ಯುಗಾದಿ' 'ಶ್ರಾವಣ ವೈಭವ', 'ವಿತುಗಾನ' 'ಬೆಳುದಿಂಗಳನೋಡ' 'ಮಲ್ಲಿಗೆ' 'ಹೂವೆ' 'ಮತ್ತೆಗ್ರಾಮ ಬಂದ' ಮುಂತಾದ ಕವನಗಳಾಗಿವೆ. ಅವರಿಗೆ 'ಇಳೆ' ಎಂದರೆ 'ಜರಿಮಗಳ' ಅದು 'ಭೂಮಿತಾಯಿ', 'ಮೊದಲಗಿತ್ತಿ" ಮುಂತಾದ ಕಾವ್ಯಗಳು ಪ್ರಕೃತಿ ಮತ್ತು ಮನುಷ್ಯ ಸಂಬಂದದ ಪ್ರೇಮದ ಹರಳನ್ನು ಯುವಕ- ಯುವತಿಯರ ಮನಸಿನಲ್ಲಿ ಬಿತ್ತುವ ರೀತಿಯಲ್ಲಿ ವ್ಯಕ್ತವಾಗಿವೆ.

ಗಲ್ಲದಲ್ಲಿ ತುಪ್ಪಳೆದ್ದು
ಉಬ್ಬಿ ಹಿಗ್ಗಿ ನಡೆಯುತಿರುವಿ
ಗದ್ದವಿಡಿದು ತುಟಿಯ ತಾಕಿ
ಸೋಕಿ ಹೋದಿತೇನ ನಿನ್ನ

ಈ ಸಾಲುಗಳು ಪ್ರೇಮದ ಅನುಭೂತಿಯ ಸೂಚಕವಾಗಿದೆ. ಹಾಗಾಗಿ ಕುಣಿಯೋಣ ಬಾರ ಕವಿತೆ ಪ್ರೇಮಿಗಳಿಗಾಗಿ ಸಾಮರಸ್ಯದ ಆದರ್ಶವನ್ನು ರೂಪಿಸುವ ಮೂಲಕ ಅವರ ಪ್ರಣಯಗೀತೆಗಳಲ್ಲಿ ಮಹತ್ವದ ಸ್ಥಾನ ಪಡೆದಿದೆ. ಒಂದು ಹಾಡಿನಲ್ಲಿ ನೃತ್ಯ ನಿತ್ಯದ ಸೊತ್ತು, ಋತುಗಾನದಲ್ಲಿ ಋತುಗಳ ರಿಂಗಣಗುಣಿತ ಅಮೃತ ಶ್ರುತಿಯೊಂದನ್ನು ಕವಿಗೆ ಕೇಳಿಸಿದಂತಿದೆ. ಕೊಳಲನೂದಿದ ಕವಿತೆಯ ನಾಟ್ಯ ರಚನೆಯನ್ನು ಗುರುತಿಸುವುದು ಅದನ್ನು ಅರ್ಥೈಸುವ ಕ್ರಮದಲ್ಲಿ ಮೊದಲ ಹೆಜ್ಜೆ ಎನ್ನಬಹುದು. ಆಕಳ ಹಿಂಡಿನೊಡನೆ ಬರುವ ಗೋಪಿ ಏನೋ ಕೇಳಿಸಿದಂತೆ ಬೀದಿಯಲಿ ಗಕ್ಕನೆ ನಿಂತದ್ದನ್ನು ನೋಡಿ ಆಕೆಯ ಸಖಿ ಹಾಡಿದ್ದು, ಗೋಪಿ ಆನಂದ ಸಮಾಧಿಯಿಂದ ಎಚ್ಚೆತ್ತು ಹೇಳಿದ್ದು, ಕೊಳಲೂದಿದಲ್ಲಿಯೇ ಇದ್ದ ಆದರ ಮಾಯೆಯಲ್ಲಿ ಮೈಮರೆತು ಆಮೇಲೆ ಸುತ್ತಲಿನ ಪ್ರಪಂಚದಿಂದ ಕೊಳಲು ಊದಬೇಕೆಂದು ಸುಖಾನುಭವ ಮಾಡುವ ಗೆಳೆಯ ಹೇಳಿದ್ದು ಈ ವಾಕ್ಯಗಳಲ್ಲಿ ಪ್ರೀತಿ ಭಕ್ತಿಗಳ ಸಂಕೇತವಾದ ಗೋಪಿ ಕೇಂದ್ರದಲ್ಲಿದ್ದರೆ ಕೊನೆಯ ಸಾಳಿನಲ್ಲಿ ಕವಿಹೃದಯವನ್ನು ಸಂಕೇತಿಸುವ ಗೆಳೆಯ ಆ ಸ್ಥಾನದಲ್ಲಿದ್ದಾನೆ. ಹೀಗೆ ಪ್ರೀತಿ, ಭಕ್ತಿ ಮತ್ತು ಮುಕ್ತಿ ಇವು ಭಾವಯೋಗದ ಮೂರು ಪಾವಟಿಗೆಗಳಂತಿವೆ. ಪ್ರೇಮಿ-ಭಕ್ತ-ಕವಿ ಈ ಮೂವರ

ಸಂಗಮದ ಪರಿಣಾಮವಾಗಿ ಬೇಂದ್ರೆಯವರ ಪ್ರೇಮ ಕವಿತೆಗಳಲ್ಲಿ ಹೊಸ ದರ್ಶನದ ಪೂರ್ಣತೆಯ ಹೊಳಹು ಮಿಂಚಿನ ರೂಪದಲ್ಲಿ ವ್ಯಕ್ತವಾಗಿದೆ.

**ಪರಾಮರ್ಶನ ಗ್ರಂಥಗಳು**

ಭುವನದ ಭಾಗ್ಯ : ಜಿ.ಎಸ್.ಅಮೂರ
ಸಖೀಗೀತ : ದ.ರಾ.ಬೇಂದ್ರೆ
ದ. ರಾ. ಬೇಂದ್ರೆ : ಎನ್ಕೆ. ಕುಲಕರ್ಣಿ
ಬೇಂದ್ರೆಕಾವ್ಯ : ಜಿ. ಕೃಷ್ಣಪ್ಪ
ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ ಒಂದು ಅಧ್ಯಯನ : ಜಿ.ಕೃಷ್ಣಪ್ಪ
ಬೇಂದ್ರೆ ಕಾವ್ಯ : ರಂ. ಶ್ರೀ. ಮುಗಳಿ